ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 67-72
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ತೇರದಾಳ ಸೀಮೆಯ ಕನ್ನಡ–ಮರಾಠಿ ಸಂಬಂಧ

**ಡಾ. ವಿದ್ಯಾ ಪಾಟನಕರ**
ಸಿದ್ದೇಶ್ವರ ನಗರ, ಉಗಾರ ಖುರ್ದ, ಕಾಗವಾಡ ತಾಲೂಕು, ಬೆಳಗಾವಿ ಜಿಲ್ಲೆ

**Abstract:**
*ತೇರದಾಳ ಅತ್ತ ಮರಾಠಿ ಸಂಸ್ಕೃತಿ, ಇತ್ತ ಕನ್ನಡ ಸಂಸ್ಕೃತಿಯ ನಡುವೆ ಭಾಷಿಕವಾಗಿ ಸಮನ್ವಯ ಸಾಧಿಸಿಕೊಂಡಿದ್ದು ವಿಶೇಷ. ಚರಿತ್ರೆಯು ಭಾವನಾತ್ಮಕ ಸಂಬಂಧಗಳಿದ್ದಲ್ಲಿ ತನ್ನ ಗಡಿಗಳನ್ನು ಸಮನ್ವಯಕ್ಕೆ ಹೊಂದಿಸಿಕೊಳ್ಳುತ್ತದೆ. ಭಾಷೆಯು ಇಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ಭಾಷಿಕ ಮೂಲ ಇವೆರಡೂ ಸಂಸ್ಕೃತಿಗಳು ಒಂದೇ ರೀತಿಯಾಗಿ ಕಾಣುತ್ತವೆ. "ಕರ್ನಾಟಕ–ಮಹಾರಾಷ್ಟ್ರ ರಾಜ್ಯಗಳ ಐತಿಹಾಸಿಕ ಚರಿತ್ರೆ ಒಂದು ಕಾಲದಲ್ಲಿ ಒಂದೇ ಎನ್ನುವಂತೆ ಇತ್ತು. ಅನೇಕ ಪ್ರಾಚೀನ ಅರಸು ಮನೆತನಗಳು ಇವೆರಡನ್ನು ಅನೇಕ ವರ್ಷಗಳವರೆಗೆ ಸಮಾನವಾಗಿ ಆಳಿದವು."[1] ಎರಡೂ ರಾಜ್ಯಗಳನ್ನು ಒಂದು ಮಾಡಿಕೊಂಡೇ ಆಳಿದ್ದರಿಂದ ಅವೆರಡರ ಮಧ್ಯೆ ಸ್ಪಷ್ಟವಾದ ಸೀಮಾರೇಖೆಗಳು ಇರಲಿಲ್ಲ. ಸಂಸ್ಕೃತಿ, ಭಾಷೆ, ಇತಿಹಾಸಗಳ ಅನುಬಂಧದ ಪ್ರಶ್ನೆಗಳು ಎರಡೂ ರಾಜ್ಯಗಳ ಮಧ್ಯೆ ತಲೆಯೆತ್ತಿದಾಗ ಉತ್ತರ ಕಂಡುಕೊಳ್ಳುವುದು ಕಠಿಣವಾಗುತ್ತದೆ. ಪ್ರಸ್ತುತ ಲೇಖನದಲ್ಲಿ ತೇರದಾಳ ಸೀಮೆಯ ಕನ್ನಡ–ಮರಾಠಿ ಸಂಬಂಧವನ್ನು ಕುರಿತು ಚರ್ಚಿಸಲಾಗಿದೆ.*

**Keywords:** *ಭಾಷೆ, ತೇರದಾಳ ಸೀಮೆ, ಕನ್ನಡ–ಮರಾಠಿ ಸಂಬಂಧ.*

## ಪೀಠಿಕೆ

ಪ್ರಾಚೀನ ಮಹಾರಾಷ್ಟ್ರದಲ್ಲಿ ಕನ್ನಡ ಭಾಷೆಯ ಪ್ರಭಾವವನ್ನು ಕಾಣುತ್ತೇವೆ. ಕಾಲ ಗತಿಸುತ್ತ ಹೋದಂತೆ ಕರ್ನಾಟಕ–ಮಹಾರಾಷ್ಟ್ರದ ಸರ್ವಾಂಗೀಣ ಚಿತ್ರಣಗಳು ಬದಲಾಗುತ್ತ ಹೋಗವುದನ್ನು ಕಾಣುತ್ತೇವೆ. 12ನೆಯ ಶತಮಾನದ ನಂತರ ಮರಾಠಿ ಭಾಷೆಯು ಇನ್ನೊಂದು ಭಾಷೆಯ ಮೇಲೆ ಪ್ರಭಾವವನ್ನು ಬೀರುವಷ್ಟು ಬೆಳವಣಿಗೆಯನ್ನು ಸಾಧಿಸಿತ್ತು. ಶರಣರ ವಚನಗಳಲ್ಲಿ ಮರಾಠಿ ಪದಗಳ ಬಳಕೆ ಇದಕ್ಕೆ ಸಾಕ್ಷಿ ಒದಗಿಸುತ್ತದೆ. ಅಲ್ಲದೆ ಮರಾಠಿಯ ಪ್ರಥಮ ವಾಕ್ಯ ಕ್ರಿ.ಶ. 983ರಲ್ಲಿ ಕರ್ನಾಟಕದ ಶ್ರವಣಬೆಳಗೊಳದಲ್ಲಿ ದೊರೆತಿದ್ದನ್ನು ನಾವು ಕಾಣುತ್ತೇವೆ. ಪಂಪನ ಕೃತಿಯಲ್ಲಿಯೂ ಮರಾಠಿ ಪದಗಳ ಬಳಕೆ ಬಂದಿರುವುದನ್ನು ನಾವು ಓದುತ್ತೇವೆ. ಈ ಎಲ್ಲಾ ಕಾರಣಗಳಿಂದ ನಾವು ಕಂಡುಕೊಳ್ಳುವುದೇನೆಂದರೆ– ಮರಾಠಿ ಭಾಷೆಯು ಸಮಾಜದಲ್ಲಿ ಹತ್ತನೆಯ ಶತಮಾನಕ್ಕೆ ಹಿಂದಿನಿಂದಲೇ ಅಸ್ತಿತ್ವದಲ್ಲಿತ್ತು. ಆದರೆ ಅದು ಬರಹದ ರೂಪವನ್ನು ತಾಳಿರಲಿಲ್ಲ. ಬಳಕೆಯ ಭಾಷೆಯಾಗಿ ಅದು ಅಸ್ತಿತ್ವದಲ್ಲಿತ್ತು ಮತ್ತು ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತ ನಡೆದಿತ್ತು. ಪಂಪನಂಥ ಕವಿಯೂ ತನ್ನ ಕೃತಿಯಲ್ಲಿ ಮರಾಠಿ ಪದಗಳನ್ನು ಬಳಸಿ ತನ್ನ ಕೃತಿ ವೈಶಿಷ್ಟ್ಯವನ್ನು ಹೆಚ್ಚಿಸಿಕೊಳ್ಳಲು ಮನಸ್ಸು ಮಾಡಿರುವನೆಂದರೆ ಆ ಭಾಷೆಗೆ ನಾವು ಗೌರವ ಸಲ್ಲಿಸಲೇಬೇಕು. ಕ್ರಮೇಣ ತನ್ನ ಮಹತ್ವವನ್ನು

**Please cite this article as:** ವಿದ್ಯಾ ಪಾಟನಕರ. (2025). ತೇರದಾಳ ಸೀಮೆಯ ಕನ್ನಡ–ಮರಾಠಿ ಸಂಬಂಧ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 67–72

ಮರಾಠಿ ಹೆಚ್ಚಿಸಿಕೊಳ್ಳುತ್ತ ಬಂದು ವಿವೇಕಸಿಂಧು, ಜ್ಞಾನೇಶ್ವರಿ, ಲೀಳಾಚುತ್ರದಂಥ ಕೃತಿಗಳನ್ನು ಸಮಾಜಕ್ಕೆ ನೀಡುತ್ತದೆ. ಜ್ಞಾನೇಶ್ವರಿಯಂತೂ ಭಾರತೀಯ ಸಾಹಿತ್ಯಗಳಲ್ಲಿ ರಚಿತವಾದ ಶ್ರೇಷ್ಠ ಕೃತಿಗಳಲ್ಲಿ ಒಂದಾಗಿದೆ ಎಂಬುದನ್ನು ನಿರಾಕರಿಸುವಂತಿಲ್ಲ. ಮಧ್ಯಯುಗದಿಂದ ಮರಾಠಿಯು ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತ ನಡೆದದ್ದು ಅದು ಆಧುನಿಕ ಕಾಲದವರೆಗೂ ಮುಂದುವರೆಯುತ್ತದೆ. ಮರಾಠಿ ಭಾಷೆಯ ಪ್ರಭಾವವನ್ನು ನಾವು ವಿಶೇಷವಾಗಿ ಉತ್ತರ ಕರ್ನಾಟಕ ಭಾಷೆಯ ಮೇಲಾಗಿರುವುದನ್ನು ಕಾಣುತ್ತೇವೆ. ಗಡಿನಾಡಿನಲ್ಲಿ ಕನ್ನಡದ ಪ್ರಭಾವ ಇಲ್ಲವೆಂದಲ್ಲ, ಆದರೆ ಮರಾಠಿಯನ್ನು ನಾವು ಬಳಸುವಷ್ಟು ಕನ್ನಡವನ್ನು ಅವರು ಬಳಸಲು ಇಷ್ಟಪಡುವುದಿಲ್ಲ. ಭಾಷೆಯ ಕುರಿತಾದ ಮರಾಠಿಗರ ಸ್ವಾಭಿಮಾನ ಹೆಚ್ಚುತ್ತ ಹೋದಂತೆ ಅದು ಅತ್ಯಂತ ಶಕ್ತಿಶಾಲಿಯಾದ ಭಾಷೆಯಾಗಿ ಪರಿವರ್ತನೆ ಹೊಂದುತ್ತ ಹೋಯಿತು. ಎರಡೂ ರಾಜ್ಯಗಳ ಸೀಮೆಗಳು ನಿಶ್ಚಿತವಾಗಿವೆ. (ಅಲ್ಪಸ್ವಲ್ಪ ತಂಟೆಗಳನ್ನು ಹೊರತುಪಡಿಸಿ) ಭಾಷೆಗಳು ನಿಶ್ಚಿತವಾಗಿದೆ. ಧರ್ಮ, ಸಂಸ್ಕೃತಿಗಳು, ಸಾಹಿತ್ಯ ಕಲೆಗಳು ನಿಖರವಾಗಿವೆ. ಪ್ರತ್ಯೇಕತೆ ಎರಡೂ ರಾಜ್ಯಗಳಲ್ಲಿ ಸ್ಪಷ್ಟತೆ ತಂದಿದೆ. ಈಗ ಐವತ್ತು ಅರವತ್ತು ವರ್ಷಗಳ ಹಿಂದೆಯಷ್ಟೇ ಕರ್ನಾಟಕ–ಮಹಾರಾಷ್ಟ್ರದ ಗಡಿಭಾಗದಲ್ಲಿ ಕನ್ನಡ–ಮರಾಠಿ ಎರಡೂ ಭಾಷೆಗಳು ಸಮಾನವಾಗಿ ಪ್ರಯೋಗಗೊಳ್ಳುತ್ತಿದ್ದವು. ಎರಡೂ ಭಾಷೆಗಳನ್ನು ಜನರು ಪ್ರೀತಿಯಿಂದ ಬಳಸುತ್ತಿದ್ದರು. ನನ್ನದು–ನಿನ್ನದು ಎನ್ನುವ ಭೇದ ಅಲ್ಲಿ ಇರಲೇ ಇಲ್ಲ. ಆದರೆ ಇಂದು ಜಾಗತೀಕರಣದ ಕುರಿತು ದಿನನಿತ್ಯ ನಾವು ಚಿಂತನೆ–ವಿಮರ್ಶೆ ಮಾಡುತ್ತಿದ್ದೇವೆ. ಇಡೀ ವಿಶ್ವವನ್ನು ಒಂದುಗೂಡಿಸುವ ಇಂದಿನ ಪ್ರಯತ್ನ ಭಾವನಾತ್ಮಕವಾಗಿ ವಿಚಾರ ಮಾಡಿದರೆ ಅತ್ಯುತ್ತಮ ಎಂದೇ ಹೇಳಬೇಕಾಗುತ್ತದೆ. ನಮ್ಮ–ನಮ್ಮ ಗಡಿಭಾಗಗಳತ್ತ ಗಮನಹರಿಸಿದಾಗ ಭಾಷಿಕ ಪ್ರತ್ಯೇಕತೆಯನ್ನು ತರಲು ನಾವು ಉದ್ದೇಶಪೂರ್ವಕವಾಗಿ ಹೇಗೆ ಪ್ರಯತ್ನಿಸುತ್ತಿದ್ದೇವೆ ಎಂಬುದು ಅರ್ಥವಾಗುತ್ತದೆ. ಇಂದಿನ ಮಹಾರಾಷ್ಟ್ರದ ಯುವ ಮತ್ತು ನವ ಪೀಳಿಗೆ ಶುದ್ಧ ಮರಾಠಿಯ ಪ್ರಯೋಗವನ್ನು ಮಾಡುತ್ತ ಭಾಷಾ ಶುದ್ಧೀಕರಣದತ್ತ ಹೆಚ್ಚು ಒಲವು ತೋರಿಸುತ್ತಿರುವುದನ್ನು ಕಾಣಬಹುದಾಗಿದೆ. ಅಚ್ಚಗನ್ನಡದ ಲಿಂಗಾಯತ–ಜೈನ ಕುಟುಂಬಗಳಲ್ಲಿಯೂ ಇಂದು ಭಾಷಿಕ ವಿಷಯದಲ್ಲಿ ಅಮೂಲಾಗ್ರ ಬದಲಾವಣೆ ಕಾಣುತ್ತೇವೆ. ಅಲ್ಲಿ ಕನ್ನಡಕ್ಕಿಂತ ಮರಾಠಿಯ ಬಳಕೆ ಅತ್ಯಂತ ಪ್ರಬಲವಾಗಿದೆ ಎಂಬುದು ವಾಸ್ತವ ಸಂಗತಿ. ಅಲ್ಲಿಯ ಕುಟುಂಬಗಳ ಹಿರಿಯರಿಗೆ ಮಾತ್ರ ಕನ್ನಡ ಬರುತ್ತದೆ. ಯುವಕರಿಗೆ ಕನ್ನಡ ಕಲಿಯುವಲ್ಲಿ ಮತ್ತು ಬಳಸುವಲ್ಲಿ ಎಳ್ಳಷ್ಟೂ ಆಸಕ್ತಿ ಇಲ್ಲ. ಹೀಗೆ ಭಾಷೆಯು ಪ್ರತ್ಯೇಕವಾಗಿ ಮನೆಮಾಡತೊಡಗಿತೆಂದರೆ ಎರಡು ಗಡಿ ಮನಸ್ಸುಗಳು ಹೇಗೆ ತಾನೆ ನುಡಿ ನೆಮ್ಮದಿಯಿಂದ ಬದುಕಬಲ್ಲವು? ಆದರೆ 'ದಿನಾಂಕ:05–10–2014 ರಂದು ಬಸವರಾಜ ಕಟ್ಟಿಮನಿ ಪ್ರತಿಷ್ಠಾನದ ಪ್ರಶಸ್ತಿ ಸ್ವೀಕರಿಸಲು ಬಂದಿದ್ದ (ತರುವಾಯ ಅವರಿಗೆ ಜ್ಞಾನಪೀಠ ಪ್ರಶಸ್ತಿ ಮರಾಠಿಯಲ್ಲಿ ದೊರೆಯಿತು) ಬಾಲಚಂದ್ರ ನೇಮಾಡೆಯವರು ಆ ವೇದಿಕೆಯ ಮೇಲೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತ 'ನಾನು ಭಾರತೀಯನೆಂದರೆ ನಾನು ಸತ್ಯಕ್ಕೆ ಸಮೀಪವಾಗುತ್ತೇನೆ. ಒಂದು ವೇಳೆ ನಾನು ಕರ್ನಾಟಕದವ, ಮಹಾರಾಷ್ಟ್ರದವ ಎಂದರೆ ನಾನು ಸುಳ್ಳು ಇತಿಹಾಸ ನಿರ್ಮಿಸಬೇಕಾಗುತ್ತದೆ' ಎಂದು ಹೇಳಿ ಮತ್ತೆ ಅವರು "Borders unite the people", ಅಂದರೆ 'ಸೀಮೆಗಳು ಇರುವುದೇ ಕೂಡಿ ಬದುಕಲು' ಎಂದು ಹೇಳಿದರು. ಅವರು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದ ಎರಡು ಪ್ರಮುಖ ವಿಚಾರಗಳೆಂದರೆ ನಾನು ನನ್ನ ಇತಿಹಾಸ ನಿರ್ಮಿಸಲು ಹೋದರೆ ಬಹಳ ಕುಬ್ಜನಾಗುತ್ತೇನೆ. ಮತ್ತು ಇಲ್ಲಿಯವರೆಗಿನ ಇತಿಹಾಸವು ಸತ್ಯವಾಗಿಲ್ಲ. ನಮಗೆ ಬೇಕಾದಂತೆ ಅದನ್ನು ತಿರುಚಿ ಬರೆಯುತ್ತೇವೆ ಎಂಬುದು ಒಂದಾದರೆ, ಇನ್ನೂ ವಾಸ್ತವದಲ್ಲಿ

ಸೀಮಾಭಾಗದ ಅಂದರೆ ಗಡಿಭಾಗದಲ್ಲಿ ವಾಸಿಸುತ್ತಿರುವ ಜನರು ಸೌಹಾರ್ದದಿಂದಲೇ ಬದುಕುತ್ತಿದ್ದಾರೆ. ಆದರೆ ರಾಜಕಾರಣವು ಅದರ ದಾರಿಯನ್ನು ತಪ್ಪಿಸುತ್ತಿರುತ್ತದೆ ಎಂಬುದು ಎರಡನೆಯದು. ನೇಮಾಡೆಯಂಥ ಪ್ರಬುದ್ಧ ಸಾಹಿತಿಗಳು ಈ ರೀತಿಯ ವಿಚಾರ ವ್ಯಕ್ತಪಡಿಸಿ ನಮ್ಮಲ್ಲಿ ಮನೆಮಾಡುತ್ತಿರುವ ನಿರಾಸೆ ಮತ್ತು ಸಂಶಯದ ಭಾವವನ್ನು ತೊಲಗಿಸುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ನಾವೆಲ್ಲರೂ ಅವರ ವಿಚಾರಗಳನ್ನು ಅನುಮೋದಿಸಲೇಬೇಕು. ಮರಾಠಿಗರು ಮಾತ್ರ ಭಾಷಾ ಪ್ರೇಮದಲ್ಲಿ, ಬಳಕೆಯಲ್ಲಿ ಹೆಚ್ಚು ಕಠೋರರಾಗಿದ್ದಾರೆ. ಕನ್ನಡಿಗರ ಮರಾಠಿ ಪ್ರೇಮವೂ ಇಂದು ದಿನೇ–ದಿನೇ ಕ್ಷೀಣಿಸುತ್ತಾ ನಡೆದಿರುವುದನ್ನು ನಾವು ಬಚ್ಚಿಟ್ಟುಕೊಳ್ಳಲಾರೆವು. ಭಾಷಿಕ ಸಂಕುಚಿತತೆ ಮತ್ತು ಧಾರ್ಮಿಕ ಸಂಕುಚಿತತೆ ನಮ್ಮನ್ನು ಮತ್ತೆ ಹಿಂದಕ್ಕೆ ತಳ್ಳುತ್ತಿರುವಂತೆ ಭಾಸವಾಗುತ್ತದೆ."[3]

ಒಟ್ಟಿನಲ್ಲಿ ಸಾಂಸ್ಕೃತಿಕ ವಿಶಾಲ ತತ್ವಕ್ಕೆ ಇಂದು ಹಿನ್ನಡೆಯಾಗುತ್ತಿರುವುದು ದುರಾದೃಷ್ಟಕರ ಸಂಗತಿ. ಇಂದಿನ 'ಗಡಿ' ರಾಜಕೀಯವು ಹೆಚ್ಚಾಗಿ ರಾಜಕೀಯ ಪ್ರೇರಿತವಾಗಿದೆ. ಅದು ನಮ್ಮ–ನಮ್ಮ ಸ್ವಾರ್ಥವನ್ನು ಸಾಧಿಸುವ, ಲಾಭವನ್ನು ಬಯಸುವ ವ್ಯಾಪಾರದ ಸ್ವರೂಪ ತಾಳಿದ್ದು ಅತ್ಯಂತ ಖೇದಕರ. ಇಂದು ಪ್ರತ್ಯೇಕತೆಯ ಧ್ವನಿಗಳು ಗಡಿಗಳಲ್ಲಿ ಮೊಳಗುತ್ತಲಿವೆ. ಕೆಲವು ಸಲ ಉಗ್ರ ಸ್ವರೂಪವನ್ನೂ ತಾಳಿ ಸಾಮಾಜಿಕ ನೆಮ್ಮದಿಯನ್ನು ಕೆಡಿಸುತ್ತಿರುತ್ತವೆ. ಭಾಷಾಪ್ರೇಮ ಮೆಚ್ಚುವಂತಹದಾದರೂ ಅದು ಇನ್ನೊಬ್ಬರ ಸ್ವಾತಂತ್ರವನ್ನು ಕಸಿದುಕೊಳ್ಳಬಾರದು.

ಇಂದು ಮರಾಠಿ ಭಾಷೆಯು ಸಮೃದ್ಧಗೊಂಡಿದೆ. ಸಮಗ್ರ ಸ್ವರೂಪ ತಾಳಿ ಶಾಸ್ತ್ರೀಯ ಭಾಷೆಯ ಗೌರವವನ್ನು ಪಡೆಯುವ ಹೊಸ್ತಿಲಲ್ಲಿದೆ. ಹೀಗೆ ಬೆಳೆದ ಮತ್ತು ಇನ್ನೂ ಬೆಳೆಯುತ್ತಿರುವ ಮರಾಠಿ ಭಾಷೆಯು ಸಾಂಸ್ಕೃತಿಕವಾಗಿ ಅದು ಎಷ್ಟು ಪ್ರಾಚೀನ ಎಂಬುದು ಬಗೆಹರಿಯದ ಪ್ರಶ್ನೆ ಎನಿಸಿದರೂ ಒಳಹೊಕ್ಕು ನೋಡಿದರೆ ಅದರ ರೂಪ–ಸ್ವರೂಪಗಳ ಸೂಕ್ಷ್ಮ ಚಿತ್ರಣವನ್ನು ಕಂಡುಕೊಳ್ಳಬಹುದು. ಜಗತ್ತಿನ ಯಾವ ಭಾಷೆಯೂ ಒಮ್ಮೆಲೇ ಜನ್ಮ ತಾಳಲಿಲ್ಲ. ಅದು ಅನೇಕ ಅವಸ್ಥೆಗಳನ್ನು ತೆವಳುತ್ತ, ದಾಟುತ್ತ ಕಾಲಾಂತರದಲ್ಲಿ ಒಂದು ಹಂತಕ್ಕೆ ಬಂದು ನಿಲ್ಲುತ್ತದೆ ಮತ್ತು ತನ್ನ ಸರ್ವಾಂಗೀಣ ವಿಕಾಸವನ್ನು ಸಾಧಿಸುತ್ತದೆ. ಭೌಗೋಳಿಕವಾಗಿ ಮಹಾರಾಷ್ಟ್ರದ ಅಸ್ತಿತ್ವ ಅತ್ಯಂತ ಅರ್ವಾಚೀನವಾಗಿದೆ. ಇತಿಹಾಸ ಆರಂಭವಾಗುವ ಪೂರ್ವದಲ್ಲಿ ಈ ಪ್ರದೇಶದಲ್ಲಿ ಅನೇಕ ಜನಾಂಗಗಳು ವಾಸಮಾಡಿವೆ. ತದನಂತರ ವಲಸೆ ಹೋಗಿವೆ, ಸ್ಥಳಾಂತರಗೊಂಡಿವೆ. ಅದಕ್ಕೆ ಅನೇಕ ನೈಸರ್ಗಿಕ ಕಾರಣಗಳಿರಬೇಕು. ಪ್ರಾದೇಶಿಕ ವಿಭಿನ್ನತೆಯ ಹಿನ್ನೆಲೆಯಲ್ಲಿ ಅಂದು ವಾಸಮಾಡುತ್ತಿದ್ದ ಇಲ್ಲಿಯ ವಿಭಿನ್ನ ಜನಾಂಗಗಳ ಭಾಷೆಯೂ ವಿಭಿನ್ನವಾಗಿರಬೇಕು. ಮೌಖಿಕ ರೂಪದಲ್ಲಿ ಹುಟ್ಟಿಕೊಳ್ಳುವ ಭಾಷೆಗೆ ಯಾವ ಬದ್ಧತೆ ಮತ್ತು ವ್ಯವಸ್ಥೆಗಳು ಇರುವುದಿಲ್ಲ. ಅವ್ಯವಸ್ಥೆಯೇ ಅದರ ಲಕ್ಷಣವಾಗಿರುತ್ತದೆ. ಶಾತವಾಹನರ ಕಾಲದಿಂದ ಮಹಾರಾಷ್ಟ್ರದ ಇತಿಹಾಸ ತೆರೆದುಕೊಳ್ಳುತ್ತದೆ ಎಂದು ಭಾವಿಸಲಾಗುತ್ತದೆ. ಅವರ ಭಾಷೆ ಪ್ರಾಕೃತವಾಗಿತ್ತು. ಮುಂದೆ ಶಾತವಾಹನರ ಆಳ್ವಿಕೆ ಕರ್ನಾಟಕ, ಆಂಧ್ರವರೆಗೂ ವ್ಯಾಪಿಸುತ್ತದೆ. ಮಹಾರಾಷ್ಟ್ರ, ಆಂಧ್ರ, ಕರ್ನಾಟಕವನ್ನು ಶಾತವಾಹನರು ಆಳಿದ್ದರಿಂದ ಅವರ ಮೂಲದ ಬಗ್ಗೆ ವಾದವಿವಾದ–ಸಂಶಯಗಳು ತಲೆಯೆತ್ತಿದವು. ದೊರೆತ ಆಧಾರಗಳಿಂದ ಇಲ್ಲಿಯವರೆಗೆ ಕರ್ನಾಟಕದ ಶ್ರವಣಬೆಳಗೋಳದ ಗೊಮ್ಮಟನ ಪಾದದಲ್ಲಿ ದೊರೆಯುವ 'ಚಾವುಂಡರಾಯ ಕರವಿಯಲೆ' ಎಂಬ ಶಾಸನೋಕ್ತ ಮರಾಠಿ ಉಲ್ಲೇಖವೇ ಮರಾಠಿಯ ಪ್ರಥಮ ದರ್ಶನ ಎಂದು ಸಾರ್ವತ್ರಿಕವಾಗಿ ಭಾವಿಸಲಾಗುತ್ತದೆ. ಮರಾಠಿಯ ಮೂಲ ಉಲ್ಲೇಖ ಅದೂ ಕರ್ನಾಟಕದಲ್ಲಿ! ಆಶ್ಚರ್ಯವೆನಿಸುತ್ತದೆ. ಆದರೆ ಇದು ಯಾವ ಪ್ರಕಾರದ ಸಂಪರ್ಕ ಎಂಬುದು ಸ್ಪಷ್ಟವಾಗುವುದಿಲ್ಲ. ರಾಜಕೀಯ ಸಂಪರ್ಕವೋ!

ಧಾರ್ಮಿಕ ಸಂಪರ್ಕವೋ, ಔದ್ಯೋಗಿಕ ಸಂಪರ್ಕವೋ, ಪ್ರಕೃತಿ ವಿಪರೀತ ಕಾರಣದ ಸಂಪರ್ಕವೋ ಎಂಬುದನ್ನು ಸ್ಪಷ್ಟಪಡಿಸಲಾರದ ಸಂಪರ್ಕ ಇದಾಗಿದೆ. ಬಹುಶಃ ಮೇಲಿನ ಎಲ್ಲ ಕಾರಣಗಳೂ ಈ ಸಮನ್ವಯಕ್ಕೆ ಕಾರಣವಾಗಿರಬೇಕು ಎಂದು ಹೇಳಿದರೆ ತಪ್ಪಿಲ್ಲ. "ಕ್ರಿ.ಶ. ಸುಮಾರು 2200 ವರ್ಷಗಳ ಹಿಂದಿನ ಶಾಸನವೊಂದು ಪುಣೆ ಜಿಲ್ಲೆಯ ಜುನ್ನೂರು ಹತ್ತಿರದ ನಾಣೇಘಾಟದಲ್ಲಿ ದೊರೆತಿದ್ದು, ಆ ಶಿಲಾಶಾಸನದಲ್ಲಿ 'ಮಹಾರಠಿನೋ' ಎಂಬ ಉಲ್ಲೇಖವಿದೆ. ಈ ಶಾಸನವು ಮಹಾರಾಷ್ಟ್ರೀ ಭಾಷೆಯಲ್ಲಿದೆ. ಅಂದರೆ ಮರಾಠಿ ಭಾಷೆಯಲ್ಲಿದೆ. 'ಗಾಥಾಸಪ್ತಶತಿ'ಯು ಶಾತವಾಹನರ ಹಾಲರಾಜನಿಂದ ರಚಿತವಾದ ಕೃತಿ. ಇದರ ಕಾಲ ಸುಮಾರು ಕ್ರಿ. ಪೂ. ಒಂದನೆಯ ಶತಮಾನ. 'ಮಹಾರಾಷ್ಟ್ರೀ ಪ್ರಾಕೃತ'ವು ಇದರ ಭಾಷೆ. 'ಮಹಾರಾಷ್ಟ್ರೀ ಪ್ರಾಕೃತವು ಶಾತವಾಹನರ ಮಾತೃಭಾಷೆ ಆಗಿತ್ತು. ಪ್ರಾಕೃತವು ಅವರ ಆಸ್ಥಾನ ಭಾಷೆಯಾಗಿತ್ತು. ಈ ಹೊಸ ಸಂಶೋಧನೆಯು ಮರಾಠಿ ಭಾಷೆಯ ರೂಪ–ಸ್ವರೂಪವನ್ನೇ ಬದಲಾಯಿಸಿಬಿಟ್ಟಿದೆ. ಈ ಹೇಳಿಕೆ ಮರಾಠಿ ಭಾಷೆಯ ಪ್ರಾಚೀನತೆಯನ್ನು ಸುಮಾರು 2000 ವರ್ಷಗಳ ಪೂರ್ವಕ್ಕೆ ಒಯ್ಯುತ್ತದೆ. ಅದರ ವ್ಯುತ್ಪತ್ತಿಯನ್ನು ಮಹಾರ>ಮಹಾರಠಿ>ಮರಹಟ್ಟಿ>ಮರಾಟೀ>ಮರಾಠಿ ಎಂದು ಹೇಳುತ್ತಾರೆ. ಇಂದಿನ ವಿದ್ವಾಂಸರು, ಮಹಾರಾಷ್ಟ್ರೀ ಪ್ರಾಕೃತ, ಅಪಭ್ರಂಶ ಮರಾಠಿ ಮತ್ತು ಮರಾಠಿ ಇವು ಬೇರೆ ಬೇರೆಯಲ್ಲ; ಅವು ಒಂದೇ ಭಾಷೆಯ ಮೂರು ಸ್ವರೂಪಗಳು ಎಂದು ಒಪ್ಪಿಕೊಳ್ಳುತ್ತಾರೆ. ಸಂಸ್ಕೃತ ಭಾಷೆಯ ಪ್ರಭಾವದಿಂದಾಗಿ ಅದು 'ಮಹಾರಾಷ್ಟ್ರೀ' ಎಂಬ ಪರಿಷ್ಕೃತ ನಾಮ ಪಡೆಯಿತು. ನಾಗರ, ವೈದರ್ಭೀ, ದಾಕ್ಷಿಣಾತ್ಯ, ಮಹಾರಾಷ್ಟ್ರ ಮುಂತಾದ ಅಪಭ್ರಂಶ ಭಾಷೆಗಳು ಈಗಿನ ವಿದರ್ಭ ಮರಾಠವಾಡಾ ಪ್ರದೇಶಗಳಲ್ಲಿ ಪ್ರಚಲಿತದಲ್ಲಿದ್ದವು. ಈ ಅಪಭ್ರಂಶ ಭಾಷೆಗಳಲ್ಲಿ ನಾವು ಮರಾಠಿಯ ಮೂಲವನ್ನು ಕಾಣಬಹುದಾಗಿದೆ. ಅಸಕ, ಕುಂತಲ, ಅಪರಾಂತಕ, ವಿದರ್ಭಗಳ ಭಾಷೆ ಮಹಾರಾಷ್ಟ್ರೀ ಪ್ರಾಕೃತವಾಗಿತ್ತು. ವೇದಕಾಲದಲ್ಲಿಯ ಮೌಖಿಕ ಭಾಷೆಯೇ ಸರ್ವಶಿಕ್ಷಣಕ್ಕಾಗಿ ಬರೋಡದ ಸಯಾಜಿರಾವ್ ಗಾಯಕ್ವಾಡರು ಬಾಬಾಸಾಹೇಬರಿಗೆ ಆರಂಭದಲ್ಲಿ ಸಹಾಯ ಮಾಡಿದ್ದರು. ಶಾಹುರವರು ಉನ್ನತ ಶಿಕ್ಷಣಕ್ಕಾಗಿ ಬಾಬಾಸಾಹೇಬರಿಗೆ ಸಹಾಯಮಾಡಿ ಅವರ ದಲಿತ ಚಳುವಳಿಗೆ ಪ್ರೇರಣೆ ನೀಡಿದರು. ಅಂಬೇಡ್ಕರರಿಗೆ ಫುಲೆ ಮತ್ತು ಶಾಹುರವರ ಬಗ್ಗೆ ಬಹಳ ಗೌರವವಿತ್ತು. ಟಿಳಕ–ಅಂಬೇಡ್ಕರರು ರಾಷ್ಟ್ರೀಯ ನಾಯಕರು. ಕರ್ನಾಟಕವೂ ಅವರ ಸೇವೆಯ ಫಲವನ್ನು ಪಡೆಯದೆ ಇಲ್ಲ. ಹೀಗೆ ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕ ಮಹಾರಾಷ್ಟ್ರದ ರಾಜಕೀಯ ನಾಯಕರು ರಾಜ್ಯಭೇದ ಮರೆತು ಹೋರಾಡಿದರು. ಪ್ರಾಂತವಾರು ರಾಜ್ಯಗಳ ರಚನೆಯಾದ ನಂತರ ಕರ್ನಾಟಕ–ಮಹಾರಾಷ್ಟ್ರಗಳು ಬೇರೆ–ಬೇರೆ ಒಲೆ ಹೂಡಿದವು. ಪ್ರತ್ಯೇಕತೆ ಹೆಚ್ಚುತ್ತ ಹೋಯಿತು. ಜಾಗತೀಕರಣವು ಇಂದು ವಿಶ್ವವನ್ನೆಲ್ಲ ಒಂದೇ ವೇದಿಕೆಯ ಮೇಲೆ ತರುವ ಪ್ರಯತ್ನ ಮಾಡುತ್ತಲಿದೆ ಮತ್ತೆ ನಾವೆಲ್ಲರೂ ಒಂದು ಆದರೂ ಆಗಬಹುದು. ಪ್ರಾಚೀನ ಕಾಲದಿಂದ ಅರ್ವಾಚೀನ ಕಾಲದವರೆಗಿನ ಕರ್ನಾಟಕ–ಮಹಾರಾಷ್ಟ್ರಗಳ ರಾಜಕೀಯ ನೆಲೆಯ ಚರಿತ್ರೆಯನ್ನು ಅಧ್ಯಯನ ಮಾಡುತ್ತ ಹೋದಂತೆ ಸಮಸ್ಯೆಗಳು ಸರಳವಾಗುವುದನ್ನು ಬಿಟ್ಟು ಜಟಿಲವಾಗುತ್ತ ಹೋಗುವುದನ್ನು ಕಾಣುತ್ತೇವೆ. ಸಂಕೀರ್ಣವಾದ ವಿಷಯಗಳಿಗೆ ಹಾರಿಕೆಯ ಉತ್ತರಗಳು ದೊರೆತರೂ ಅವೂ ಸ್ಥಿರವಾಗಿ ಉಳಿಯುತ್ತಿಲ್ಲ. ಆದ್ದರಿಂದ ಯಥಾಸ್ಥಿತಿ ಕಾಯ್ದುಕೊಂಡು ಹೋಗಬೇಕಾದ ಪರಿಸ್ಥಿತಿ ಅನಿವಾರ್ಯವಾಗಿದೆ. ಮರಾಠಿ ಭಾಷೆಯು ದಿನಬಳಕೆಯಲ್ಲಿ ಕನ್ನಡ ಪರಿಸರದಲ್ಲಿ ತನ್ನ ಪ್ರಭಾವವನ್ನು ಹೇಗೆ ಬೆಳೆಸಿಕೊಂಡಿದೆ ಎಂಬುದನ್ನು ನಾವು ಗಮನಿಸಬಹುದು. ಉತ್ತರ ಕರ್ನಾಟಕದಲ್ಲಿಯ ಎಲ್ಲ ಊರುಗಳಲ್ಲಿಯೂ ಮೋಡೀ ಲಿಪಿ ಚಿರಪರಿಚಿತವಾಗಿತ್ತು. ಮೊನ್ನೆ ಮೊನ್ನೆಯವರೆಗೆ

ಮೋಡೀ ಲಿಪಿ ಬಲ್ಲವರು ದೊರೆಯುತ್ತಿದ್ದರು. ಆದರೆ ಇಂದು ಮೋಡೀ ಲಿಪಿಯ ತಜ್ಞರು ಇಲ್ಲವೆಂದೇ ಹೇಳಬೇಕಾಗುತ್ತದೆ. ಕರ್ನಾಟಕದ ಈ ಭಾಗದಲ್ಲಿಯೂ ವ್ಯಾಪಾರಸ್ಥರು ತಮ್ಮ ಖಾತೆ–ಕೀರ್ದಗಳನ್ನು ಮೋಡೀ ಲಿಪಿಯಲ್ಲಿಯೇ ಬರೆದಿಡುತ್ತಿದ್ದರು. ಮರಾಠಿಯ ಮೋಡೀ ಲಿಪಿಯು ಕನ್ನಡಿಗರ ಮೇಲೆ ಮೋಡಿ ಮಾಡಿದ್ದಂತೂ ನಿಶ್ಚಿತ. ಮರಾಠಿ ಭಾಷೆಯು ಉತ್ತರ ಕರ್ನಾಟಕದ ವ್ಯವಹಾರಗಳಲ್ಲಿ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು."[4]

ದಿನಬಳಕೆಯ ಮರಾಠಿ ಪದಗಳು: "ಅಡಚಣಿ, ಪಾಳಿ, ಪಳತೆ, ಪಂಚೇತಿ, ಪಾವಣೇರು, ಪೈಲಾ, ಮಳು (ಮಳಾ), ಮೆಕ್ಕೆ (ಮಕ್ಕಾ), ಮಾಳ (ಹಾರ), (ಮರಡಿ), ಮೇಳ, ವರಾತ, ರಗಡ, ಥಾಂಬ್, ಭಲತೆ, ಭಕ್ಕಮ, ಭರಪೂರ, ದಾಂಡಗ್ಯಾ, ನಾಷ್ಟಾ, ವಜನ, ಅಂಘೋಳ, ಗಬರು, ಮುಂತಾದವು. ಸಂಖ್ಯಾವಾಚಕ ಪದಗಳು: ಅಂಕಿ ಸಂಖ್ಯೆಗಳನ್ನು ಬಳಸುವಾಗ ಸಂಪೂರ್ಣವಾಗಿ ಮರಾಠಿ ನಾಮಗಳನ್ನು ಉಚ್ಚರಿಸುವುದೇ ಸಾಮಾನ್ಯವಾದ ಸಂಗತಿಯಾಗಿದೆ. ಉದಾ: ಏಕ್, ಸವಾದಿಡ, ಪಾವಣೇಕ್, ಪಾವಣೇದೋನ, ದಹಾ, ಪನ್ನಾಸ, ಶಂಬರ, ಹಜಾರ, ಲಾಖ, ತಿರಸಷ್ಟ ಮುಂತಾದವು. ಸಂಬಂಧವಾಚಕ ಪದಗಳು: ಮಾಮಾ, ಮಾಮೀ, ಮೌಸಿ, ಕಾಕಾ, ಕಾಕೀ, ಮಾಂವ, ಅತ್ಯಾ ಪೋರಿ, ಪೋರ, ಆಯೇ, ಅಜ್ಜಿ ಮುಂತಾದವು."[5]

**ಉಡುಗೆ–ತೊಡುಗೆ:** ಧೋತರ, ಪಟಕಾ, ಟೋಪಿ, ಝುಂಪರ, ಹಾರ, ಪೈಂಜಣ, ಮುಗವಟ್ಟ, ಪಾಟಲೀ, ಕಂಬರಪಟ್ಟಾ, ಬೋರಮಾಳಾ, ಮುಂತಾದವು. ಕುರಸಾಲ್ಯಾ, ಭಾಡ್ಯಾ, ಭಡವ್ಯಾ, ಭಾಡಖಾವೂ, ಖುಳ್ಯಾ ಮುಂತಾದವು ಬೈಗುಳಗಳು ಸೌಮಸ್ವರೂಪದ ಬೈಗಳುಗಳು. ಉಗ್ರಸ್ವರೂಪದ ಬೈಗಳುಗಳಲ್ಲಿ ಅದ್ಯಾಹಾರಗಳಾಗಿವೆ. ಹೀಗೆ ದಿನಗಳಕೆಯ ಭಾಷೆಯು ಇಂದಿಗೂ ಮರಾಠಿಯ ಪ್ರಭಾವದಿಂದ ಬಿಡಿಸಿಕೊಂಡಿಲ್ಲ. ಕೆಲವೊಂದು ಮನೆತನಗಳಲ್ಲಿ ಹೆಣ್ಣುಮಕ್ಕಳು ಮರಾಠಿ ಮಾತಾಡುತ್ತಾರೆ, ಗಂಡಸರು ಕನ್ನಡ ಮಾತಾಡುತ್ತಾರೆ. ವಿಶೇಷವಾಗಿ ಮರಾಠಿ ಮನೆತನಗಳಲ್ಲಿ ಮತ್ತು ಮಹಾರಾಷ್ಟ್ರದಿಂದ ತಂದ ಹೆಣ್ಣುಮಕ್ಕಳ ಮನೆಗಳಲ್ಲಿ ಈ ರೀತಿಯ ಮರಾಠಿ ಪ್ರಭಾವವನ್ನು ನಾವು ಕಾಣುತ್ತೇವೆ. ದ.ರಾ ಬೇಂದ್ರೆ ಮತ್ತು ಶಂ.ಭಾ ಜೋಶಿಯವರು ಮರಾಠಿ ಭಾಷೆಯಲ್ಲಿ ತಮ್ಮ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಕರ್ನಾಟಕದ ಜನರು ಭಾಷೆಯನ್ನು ಬಳಸುವಲ್ಲಿ ಅಭಿಮಾನವನ್ನು ತೋರಿಸುವುದಿಲ್ಲ. ಎಲ್ಲಿ ವಾಸಮಾಡುತ್ತಾರೋ ಆ ಭಾಷೆಯನ್ನೆ ಮಾತನಾಡಲು ಪ್ರಯತ್ನಿಸುತ್ತಾರೆ. ಆದರೆ ಮರಾಠಿಗರು ತನ್ನ ಭಾಷೆಯನ್ನು ಎಲ್ಲಿ ಹೋದರೂ ಬಿಡುವುದಿಲ್ಲ. ನಿಜವಾಗಿ ಭಾಷಾಭಿಮಾನವನ್ನು ಮರಾಠಿಗರಿಂದ ಕಲಿತುಕೊಳ್ಳಬೇಕು.

ಒಟ್ಟಾರೆಯಾಗಿ ಹೇಳಬೇಕೆಂದರೆ ಇಂದು ಕನ್ನಡ–ಮರಾಠಿ ಭಾಷಾ ಸಮನ್ವಯದ ವ್ಯವಹಾರಿಕ ಬಳಕೆ ಹೆಚ್ಚು ಪ್ರಮುಖವಾಗಿದೆ. ಅಂದರೆ ಗಡಿಭಾಗದಲ್ಲಿ ವಿಶೇಷವಾಗಿ, ಮಹಾರಾಷ್ಟ್ರದ ಕೊಲ್ಲಾಪೂರ, ಸಾಂಗಲಿ, ಸೊಲ್ಲಾಪೂರ, ಮಿರಜ, ಸತಾರ ಪ್ರದೇಶಗಳು ಮತ್ತು ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಗುಲಬರ್ಗಾ, ಬೀದರ, ಧಾರವಾಡ, ರಾಯಚೂರ ಜಿಲ್ಲೆಗಳು ಕನ್ನಡ–ಮರಾಠಿ ಸಮನ್ವಯ ಭಾಷೆಯನ್ನು ವ್ಯವಹಾರದಲ್ಲಿ ಇಂದಿಗೂ ಉಪಯೋಗಿಸುತ್ತಿದ್ದಾರೆ. ಕನ್ನಡ–ಮರಾಠಿ ಭಾಷೆಗಳು ಎಷ್ಟೇ ಪ್ರಾದೇಶಿಕ ಶಿಸ್ತಿಗೆ ಒಳಪಟ್ಟರೂ ವ್ಯವಹಾರಿಕವಾಗಿ ಭಾಷೆಯ ಸಮನ್ವಯತೆ ಇನ್ನೂ ಜೀವಂತವಾಗಿದೆ. ಅಲ್ಲದೆ ಉತ್ತರ ಕರ್ನಾಟಕದ ಜನರು ಆಸ್ಪತ್ರೆಗೆಂದು ಮಿರಜಗೆ ಹೋಗುತ್ತಾರೆ. ಮೀರಜವು ಆಸ್ಪತ್ರೆಗಳಿಗಾಗಿ ಬಹಳ ಪ್ರಸಿದ್ಧವಿದೆ. ಬ್ರಿಟಿಷರ ಕಾಲದ 'ಮಿಶನ್ ಹಾಸ್ಪಿಟಲ್'ವು ಈ ಹಿಂದೆ ಬಹಳ ಪ್ರಸಿದ್ಧವಾಗಿತ್ತು. ಉತ್ತರ ಕರ್ನಾಟಕದಲ್ಲಿಯೇ ಅಂಥ ಆಸ್ಪತ್ರೆ ಆ ಕಾಲದಲ್ಲಿ ಇರಲಿಲ್ಲ ಎಂದರೆ ಅತಿಶಯೋಕ್ತಿಯೇನಲ್ಲ. ಕರ್ನಾಟಕದ ಅನೇಕ ಭಾಗಗಳಿಂದ ಜನರು ಆ ಕಾಲದಲ್ಲಿ ಮೀರಜಕ್ಕೆ

ಬರುತ್ತಿದ್ದರು. ಇಂದಿಗೂ ಬೆಳಗಾವಿ, ವಿಜಾಪೂರ, ಗುಲಬರ್ಗಾ, ಬಾಗಲಕೋಟೆ, ಬಾದಾಮಿ ಭಾಗಗಳಿಂದ ದವಾಖಾನೆಗೆಂದು ಮೀರಜಕ್ಕೆ ನಿತ್ಯ ಜನರು ಬರುತ್ತಿರುವುದು ಸಾಮಾನ್ಯವಾಗಿದೆ. ಈ ಕಾರಣಕ್ಕಾಗಿಯೇ ಮೀರಜಿನ ಪ್ರತಿಯೊಂದು ದವಾಖಾನೆಯ ಎದುರು ಕನ್ನಡದ ಫಲಕ ಇದ್ದೇ ಇರುತ್ತದೆ. ಮರಾಠಿಯ ಪ್ರತಿಯೊಬ್ಬ ವೈದ್ಯರಿಗೆ ಕನ್ನಡ ಮಾತನಾಡಲು ಚೆನ್ನಾಗಿ ಬರುತ್ತದೆ. ವ್ಯವಹಾರಿಕವಾಗಿ ಭಾಷೆಗಳೆರಡು ಇಲ್ಲಿ ಸಮನ್ವಯಗೊಂಡಿದ್ದನ್ನು ನಾವು ಕಾಣುತ್ತೇವೆ. ಮೀರಜಿಗೆ ಬಂದ ಕನ್ನಡಿಗನೂ ಮರಳಿ ತನ್ನ ನಾಡಿಗೆ ಹೋಗುವಾಗ ಮರಾಠಿಯನ್ನು ತನ್ನ ನಾಡಿಗೆ ಕರೆದೊಯ್ಯುವುದು ವಾಡಿಕೆಯಾಗಿದೆ. ಹೀಗೆ ಕನ್ನಡ ಮತ್ತು ಮರಾಠಿ ಸಂಬಂಧವನ್ನು ಕಾಣಬಹುದಾಗಿದೆ.

**ಕೊನೆಟಿಪ್ಪಣಿಗಳು**

1. ಗಾಟಗೆ, ಎ. ಬಿ. *ಕರ್ನಾಟಕ ಮಹಾರಾಷ್ಟ್ರದ ಸಾಂಸ್ಕೃತಿಕ ಅಧ್ಯಯನದ ತಾತ್ವಿಕತೆ.* ಕನ್ನಡ ವಿಶ್ವವಿದ್ಯಾಲಯ. ಪುಟ 43.
2. ತೊರೊ, ಅ.ರಾ, ಮಹಾರಾಷ್ಟ್ರ ಕರ್ನಾಟಕ ಸಾಂಸ್ಕ್ರತಿಕ ಅನುಬಂಧ ಪುಟ 41–42.
3. ಗಾಟಗೆ, ಎ.ಬಿ. *ಪೂರ್ವೋಕ್ತ.* ಪುಟ 44.
4. ಕಲ್ಬುರ್ಗಿ, ಎಂ.ಎಂ. *ಮಹಾರಾಷ್ಟ್ರದ ಕನ್ನಡ ಶಾಸನಗಳು.* ಪುಟ 7.
5. ವಕ್ತೃ–ಪರಶುರಾಮ ಮಾಸ್ತಿ ವಯಸ್ಸು 70, ಉದ್ಯೋಗ ಕೃಷಿ, ತೇರದಾಳ

**ಪರಾಮರ್ಶನ ಗ್ರಂಥಗಳು**


- ಜೋಶಿ, ಶಂ.ಬಾ. *ಮಹಾರಾಷ್ಟ್ರದ ಮೂಲ.* ಶಂ.ಬಾ. ವಿಚಾರ ವೇದಿಕೆ.
- ಕಲ್ಬುರ್ಗಿ, ಎಂ.ಎಂ. (2012). *ಮಹಾರಾಷ್ಟ್ರದ ಕನ್ನಡ ಶಾಸನಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ಲಿಂಗದಹಳ್ಳಿ ಹಾಲಪ್ಪ. (2010). *ಮುಂಬಯಿ ಕರ್ನಾಟಕ ಸಂಸ್ಕೃತಿ ಮತ್ತು ಜನಾಂಗ.* ಕನ್ನಡ ಸಾಹಿತ್ಯ ಪರಿಷತ್ತು.